ಪ್ರಬಂಧ

ಮಾಡಿದ್ದರಿಂದ ಹೋಗಬೇಕಾಯಿತು. ಬೆಣ್ಣೆಯಂತೆ ನುಣುಪಾದ, ಲಂಬಕೋನಗಳಂತೆ ನೇರವಾಗಿರುವ ಬಯಲುಸೀಮೆಯ ರೋಡುಗಳಲ್ಲಿ ಅಡ್ಡಾಡಿರುವ ನನ್ನಂತಹ ಸ್ಥಾವರ ಪ್ರಕೃತಿಯವನಿಗೆ ತಳುಕು ಬಳುಕಿನ ರಸ್ತೆಯಲ್ಲಿ ಹೋಗುವುದು ನಿಜವಾಗಿಯೂ ನರಕ. ಸ್ನೇಹಕ್ಕೆ ಮಣಿದು ಬೆಳಗ್ಗೆ ಕೊಪ್ಪದಿಂದ ಬಸ್ಸು ಹತ್ತಿದೆ. ಬಸ್ಸು ಒಂದು ತಿರುವು ಸುತ್ತುತ್ತಲೆ ಗರ್ಭಿಣಿ ಹೆಣ್ಣುಮಕ್ಕಳಂತೆ ಕಕ್ಕುತ್ತಿದ್ದೆ. ಸ್ನೇಹದ ಕಟ್ಟಿಗೆ ಬಿದ್ದು ಎಂತಹ ಕಕ್ಕುಲಾತಿ ಮಾಡಿಕೊಂಡುಬಿಟ್ಟೆ ಎನಿಸತೊಡಗಿತು.

ಎಷ್ಟೋ ಬಾರಿ ಈ ಭಾಷಣಗಳ ಸಹವಾಸ 'ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ' ಎಂಬ ಸಂದಿಗ್ಧವನ್ನು ಸೃಷ್ಟಿ ಮಾಡಿಬಿಡುತ್ತದೆ. ಒಲ್ಲೆ ಎಂದರೆ ಸ್ನೇಹಕ್ಕೆ ಕುಂದು. ಒಪ್ಪಿಕೊಂಡರೆ ಪ್ರಸವವೇದನೆ. ಒಂದು ಭಾಷಣಕ್ಕಾಗಿ ಹತ್ತಾರು ಪುಸ್ತಕಗಳನ್ನು ತಡಕಬೇಕು. ಹುಡುಕುತ್ತ ಹೋದಾಗ ಸಿಕ್ಕ ಕಚ್ಚಾ ಮಾಲನ್ನು ಅಲ್ಲಲ್ಲಿಯೇ ಪಟ್ಟಿ ಮಾಡಿಟ್ಟುಕೊಳ್ಳಬೇಕು. ಮತ್ತೆ ಅದನ್ನು ಕ್ರಮಬದ್ಧವಾಗಿ ಜೋಡಿಸಿಕೊಂಡು ಪಕ್ಕಾ ಮಾಡಿಕೊಳ್ಳಬೇಕು. ಇಷ್ಟೆಲ್ಲ ತಯಾರಿ ಮಾಡಿಕೊಂಡು ಹೋದಾಗ ಸಭಿಕರ ಮುಖಗಳು ನಮಗೆ ಆರ್ದ್ರವಾಗಿ ಪ್ರತಿಕ್ರಿಯಿಸಲಿಲ್ಲವೆಂದರೆ ಹುಳಿ ಹಿಂಡಿದಂತಾಗುತ್ತದೆ. ಹಿಂದೆ ಮಾಡಿದ್ದ ಭಾಷಣವನ್ನು ಕೇಳಿದವರಾದರೂ ಆ ಸಭೆಯಲ್ಲಿದ್ದರೆ ಕಥೆ ಮುಗಿಯಿತು. ಜಂಘಾಬಲವೇ ಉಡುಗಿಹೋಗುತ್ತದೆ. ಟಿಪ್ಪಣಿ ಮಾಡಿಕೊಂಡ ವಿಷಯಗಳಲ್ಲಿ ಯಾವುದನ್ನಾದರೂ ಬಿಟ್ಟುಬಂದಿದ್ದರೆ ಅಸಹಾಯಕ ಚಡಪಡಿಕೆ. ಧಾರವಾಡದಲ್ಲಿ ಚೆನ್ನವೀರ ಕಣವಿಯವರು ಟಿಪ್ಪಣಿ ಸಹಿತ ಭಾಷಣಗಳಿಗೆ ಪ್ರಸಿದ್ಧರಾಗಿದ್ದರು. ಕಿ.ರಂ. ಅವರ ಲೆಟರ್ ಪ್ಯಾಡುಗಳೆಲ್ಲ ಟಿಪ್ಪಣಿಗಳಿಂದಲೇ ಕೂಡಿರುತ್ತಿದ್ದವಂತೆ. ಹಾಗೆಯೆ ಯಾವ ಟಿಪ್ಪಣಿಗಳೂ ಇಲ್ಲದೆ ಮಾತನಾಡುವವರೂ ನಮ್ಮ ನಡುವೆ ಇದ್ದರು. ಕೀರ್ತಿನಾಥ ಕುರ್ತಕೋಟಿಯವರು ಟಿಪ್ಪಣಿಗಳಿಲ್ಲದೆ, ಕುಮಾರವ್ಯಾಸನ ಬಗ್ಗೆ ಹೆಗ್ಗೋಡಿನಲ್ಲಿ ಹತ್ತು ದಿನ ಮತ್ತು ಹುಬ್ಬಳ್ಳಿಯಲ್ಲಿ ಒಂದು ವಾರ ಮಹಾಭಾಷಣ ಮಾಡಿದ ದಾಖಲೆಯುಂಟು.

ಈಗೀಗಂತೂ ವೈಚಾರಿಕವಾಗಿ ಭಾಷಣ ಮಾಡುವವರನ್ನು ನಕ್ಷತ್ರಿಕರಂತೆ ಕಾಡುವವರು ಹೆಚ್ಚಾಗಿದ್ದಾರೆ. ಅದಕ್ಕಾಗಿಯೆ ಸಾರ್ವಜನಿಕ ಸಮಾರಂಭಗಳಲ್ಲಿ ವೈಚಾರಿಕವಾಗಿ ಮಾತನಾಡಲು ಅಕಾಡೆಮಿಕ್ ವಲಯದಲ್ಲಿರುವ ಎಷ್ಟೋ ಮಂದಿ ಅಂಜುವುದನ್ನು ನೋಡಿದ್ದೇನೆ. ಒಮ್ಮೆ ಹುಬ್ಬಳ್ಳಿಯ ಕಾಲೇಜೊಂದರಲ್ಲಿ ಗಾಂಧೀಜಿಯವರ ವಿಚಾರಧಾರೆಯನ್ನು ಕುರಿತು ಮಾತನಾಡುತ್ತಿದ್ದೆ. 'ಗಾಂಧೀಜಿಯವರ ಕೊಲೆಗೆ ಕೋಮುಸಾಮರಸ್ಯಕ್ಕಾಗಿ ಹಿಡಿದ ಹಠ ಮಾತ್ರವೆ ಕಾರಣವಾಗಿರದೆ ಅವರು ಇಲ್ಲಿನ ವರ್ಣಾಶ್ರಮ ವ್ಯವಸ್ಥೆಗೆ ಪೆಟ್ಟು ಕೊಟ್ಟದ್ದೂ ಕೂಡ ಮುಖ್ಯ ಕಾರಣವಾಗಿತ್ತು' ಎಂದು ಹೇಳಿದೆ. ಅಂದಿನ ಭಾಷಣದಲ್ಲಿ ಗಾಂಧಿ ಹತ್ಯೆಯ ಹಿಂದಿನ ರಾಜಕಾರಣವನ್ನೇ ಪ್ರಧಾನವಾಗಿಟ್ಟುಕೊಂಡು ಮಾತನಾಡಿದ್ದೆ. ಸಂವಾದದ ಸಮಯದಲ್ಲಿ ವಿದ್ಯಾರ್ಥಿಯೊಬ್ಬ ತಿರುಗಿ ಅದೇ ಪ್ರಶ್ನೆಯನ್ನು ಕೇಳಿದ. 'ಸರ್ ಗಾಂಧಿಯವರನ್ನು ಏಕೆ ಕೊಲೆ ಮಾಡಲಾಯಿತು?' ಅವನು ಪ್ರಶ್ನೆ ಕೇಳುವ ಧಾಟಿಯಲ್ಲಿನ ಠೇಂಕಾರ ಕೊಲೆಯನ್ನು ಸಮರ್ಥಿಸುವ ಧಾಟಿಯಲ್ಲಿತ್ತು. ಆ ದನಿಗೆ ಉಳಿದ ಅವನ ಸ್ನೇಹಿತರು ನಗುವುದರ ಮೂಲಕ ಬೆಂಬಲ ಕೊಡುತ್ತಿದ್ದರು. ಗಾಂಧೀಜಿಯವರ ಮೇಲೆ ಹೊಸ ತಲೆಮಾರಿನ ಒಂದು ದೊಡ್ಡ ಸಮುದಾಯ ನಕಾರಾತ್ಮಕ ದ್ವೇಷಮನೋಭಾವವನ್ನು ತಳೆದಿರುವುದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಎಷ್ಟೋ ಜನ ಅಧ್ಯಾಪಕರೂ ಗಾಂಧೀಜಿಯ ಹತ್ಯೆಯನ್ನು ಸಂಭ್ರಮದಿಂದ ಮಾತನಾಡುವುದನ್ನು ಕೇಳಿದ್ದೇನೆ. ಸಾದತ್ ಹಸನ್ ಮಂಟೋನ 'ಸ್ವೀಟ್ ಮೊಮೆಂಟ್' ಕಥೆ ಇಲ್ಲಿನ ಮೇಲ್ವರ್ಗಗಳಿಗೆ ಗಾಂಧಿಯ ಬಗ್ಗೆ ಇದ್ದ ಅಸಹನೆಯನ್ನು ಮೊನಚಾಗಿ ಸಾದರಪಡಿಸುವ ಮಹತ್ವದ ಅಭಿವ್ಯಕ್ತಿ.

ಭಾಷಣದ ಬಗ್ಗೆ ಮೊತ್ತಮೊದಲು ಮಾತನಾಡಿದವರು ಗ್ರೀಕರು. ಅವರು ಮೋಹಕವಾದ ರೆಟರಿಕ್ಕನ್ನು ಒಂದು ಕಲೆಯಾಗಿ ಕಟ್ಟುವುದು ಹೇಗೆ ಎನ್ನುವುದರ ಬಗ್ಗೆ ಸಿದ್ಧಾಂತಗಳನ್ನೇ ಮಂಡನೆ ಮಾಡಿದರು. ಈ ಕಲೆಯ ಬಗ್ಗೆ ಮೊದಲು ಮಾತನಾಡಿದವನು ಐಸೋಕ್ರೇಟ್ಸ್. ತದನಂತರ ಅರಿಸ್ಟಾಟಲ್ ಇದರ ತಾತ್ತ್ವಿಕ ಚರ್ಚೆಯನ್ನು ದೀರ್ಘವಾಗಿ ಮಂಡನೆ ಮಾಡಿದ. ಗ್ರೀಕರಲ್ಲಿ ರಾಜಕೀಯ ವಿಚಾರಧಾರೆಗಳನ್ನು ಉಜ್ವಲವಾಗಿ ಅಭಿವ್ಯಕ್ತಿಸಲು ಮಾತುಗಾರಿಕೆ